**ಸಾಕ್ಷಿಯನ್ನು ದಿನಾಂಕಃ 18-09-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ವಾದಿ ಪರ ವಕೀಲರವರಿಂದಃ**

ನಾನು ಶಾಲೆ ಕಲಿತಿರುವುದಿಲ್ಲ. ಈ ಕೇಸನ್ನು ಬೋಜ್ಯ ನಾಯ್ಕರು ಹಾಕೀರುವರು. ಯಾರ ವಿರುದ್ಧ ಹಾಕಿರುವರು ಎಂದು ನನಗೆ ಗೊತ್ತಿರುವುದಿಲ್ಲ. ಹೊಲದ ವಿಚಾರವಾಗಿ ಅನ್ಯಾಯವಾದ ಕಾರಣ ಈ ದಾವೆಯನ್ನು ಹಾಕಿರುವರು. ಸರ್ವೆ ನಂ 1ಕ್ಕೆ ಸಂಬಂದಿದಂತೆ ದಾವೆ ಹಾಕಿರುವರು. ಈ ದಾವೆಸರ್ವೆ ನಂ 1 ಕ್ಕೆ ಸಂಬಂದಿದಂತೆ ನಡೆದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಬೊಜ್ಯ ನಾಯ್ಕರು ನನಗೆ ಮಾವನಾಗಬೇಕು ಅಂದರೆ ಸರಿಯಲ್ಲ.

ದಾವಾ ಅಸ್ತಿಯ ಪೂರ್ವಕ್ಕೆ ಹಿರಿಯನಾಯ್ಕು ರ ಹೊಲ, ಪಶ್ಚಿಮಕ್ಕೆ ಗೊಕಟ್ಟೆ ಉತ್ತರಕ್ಕೆ ನಮ್ಮ ಹೊಲ ಹಾಗೂ ದಕ್ಷಿಣಕ್ಕೆ ಮಂಜಾನಯ್ಕು ಇವರ ಹೊಲ ಇರುವುದು.

ಉತ್ತರ ದಿಕ್ಕಿಗೆ ನನ್ನ ಜಮೀನು ಇದೆ ಎಂದು ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವುದಿಲ್ಲ. ಅಲ್ಲಿ ನನ್ನ ಜಮೀನು ಇರುವುದಿಲ್ಲ ಅಂದರೆ ಸರಿಯಲ್ಲ. ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಚೆಕ್ಕು ಬಂದಿಗಳು ದಾವಾ ಅಸ್ತಿಯ ಚೆಕ್ಕು ಬಂದಿ ಆಗಿರುವುದಿಲ್ಲ ಅಂದರೆ ಸರಿಯಲ್ಲ. ನಾನು ದಾವಾ ಅಸ್ತಿಯನ್ನು ನೋಡಿಯೇ ಇಲ್ಲ ಅಂದರೆ ಸರಿಯಲ್ಲ. ದಾವಾ ಅಸ್ತಿಯ ಪಹಣಿ ಪತ್ರಿಕೆ ಬೋಜ್ಯ ನಾಯ್ಕು ಹೆಸರಿಗೆ ಇರುವುದು. ಆ ರೀತಿ ಸುಳ್ಳು ಹೇಳುತ್ತಿದ್ದೇನ ಅಂದರೆ ಸರಿಯಲ್ಲ. ದಾವಾ ಅಸ್ತಿಯ ಪಹಣಿಯು ವಾದಿಯರ ಹೆಸರಿನಲ್ಲಿ ಇರುವುದು ಅಂದರೆ ಸರಿಯಲ್ಲ.

ವಾದಿಯರು ದಾವಣಗೆರೆ ಜಿಲ್ಲೆಯ ಹಾಲೂರು ಹಟ್ಟಿಯವರು ನನಗೆ ಜಾಲ್ಯ ನಾಯ್ಕರವರು ಹೇಳಿರುವರು. ಆ ರೀತಿ ಅವರು ಡ್ಯೂಟಿ ಮಾಡಿದಾಗ ಹೇಳಿರುವರು. ಸುಮಾರು 10-15 ವರ್ಷಗಳ ಹಿಂದೆ ಅವರು ಡ್ಯೂಟಿ ಮಾಡುತ್ತಿದ್ದರು. ಜಾನ್ಯ ನಾಯ್ಕ ಈಗ ಬದಿದ್ದಾರೋ ಇಲ್ಲವೊ ನನಗೆ ಗೊತ್ತಿಲ್ಲ. ನಾನು ನಮ್ಮ ಗ್ರಾಮದ ಮತದಾರರ ಪಟ್ಟಿಯನ್ನು ನೋಡಿದ್ದೇನೆ. ನಮ್ಮ ಗ್ರಾಮದಲಿ ಎಷ್ಟು ಮತದಾರರು ಇರುವರು ಎಂದು

ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಎಷ್ಟು ವರ್ಷಗಳಿಂದ ಸ್ವಾಧೀನದಲ್ಲಿರುವರು ಎಂದು ನಾನು ಪ್ರಮಾಣ ಪತ್ರದಲಿಲ ಹೇಳಿ ಬರೆಸಿರುವೆನು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂರದೆ ಸರಿಯಲ್ಲ,

ದಾವಾ ಅಸ್ತಿಯಲ್ಲಿ ವಾದಿಯರು ಈಗಲೂ ಸ್ವಾಧೀನ ಅನುಭವದಲ್ಲಿ ಇರುವರು ಅಂದರೆ ಸರಿಯಲ್ಲ. ಪ್ರತಿವಾದಿಗಳ ಹೆಸರಿಗೆ ಆಗಿದೆ ಎಂದು ಹೇಳಲಾದ ಪಟ್ಟಾ ನಾನು ನೋಡಿದ್ದೇನೆ. ಯಾವ ಇಸವಿಯಲ್ಲಿ ಪಟ್ಟಾ ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ಮಾತು ಕೇಳಿಕೊಂಡು ಅ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಜಾನ್ಯ ನಾಯ್ಕುರು ನಾರಾಯಣ ನಗರ ಗ್ರಾಮದ ಸರ್ವೆ ನಂ 1 ರ ಪಹಣಿಯನ್ನು ತಿದ್ದು ಪಡಿ ಮಾಡಿರುವರು. ಆ ರೀತಿ ತಿದ್ದು ಪಡಿ ಮಾಡಿದ ದಾಖಲೆ ನಾನು ನೊಡೀದ್ದೆನೇ, ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಜಾನ್ಯ ನಾಯ್ಕು ಇವರಿಗೆ ಶಿಕ್ಕೆಯಾಗಿ ಕೇಸು ನಂಬರು ನನಗೆ ಗೊತಿತಲ್ಲ. ದಾವಾ ಅಸ್ತಿ ಮತ್ತು ಪ್ರತಿವಾದಿಗಳ ಅಸ್ತಿ ಎರಡೂ ಬೇರೆ ಬೇರೆ ಆಗಿರುವುದು ಅಂದರೆ ಸರಿಯಲ್ಲ. ನನಗೆ ಈ ಕೇಸಿನ ಕುರಿತು ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಅಫಿಡವಿಟನಲ್ಲಿಎಲ್ಲಾ ವಿಷಯ ಸೃಷ್ಟಿಸಿ ಪ್ರತಿವಾದಿಗಳಿಗೆ ಸಹಾಯ ಮಾಡಲು ಮತ್ತು ವಾದಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

**18-09-2025**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 18.09.2025